ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 2, May-June 2024, Pp. 95-99
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಕುವೆಂಪು ಅವರ 'ರೈಲ್ ರಸ್ತೆ' ಕವಿತೆಯಲ್ಲಿನ ಆಧುನಿಕತೆಯ ಪ್ರತಿನಿಧೀಕರಣ ಹಾಗೂ ಪರಿಣಾಮಗಳು

**ಡಾ. ಸಂಗೀತ ಪಿ**
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸೂಲಿಬೆಲೆ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.

***Abstract:***
*ಕುವೆಂಪು ಅವರು ಕನ್ನಡದ ವಿಶಿಷ್ಟ ಧ್ವನಿ. ತಮ್ಮ ವೈವಿಧ್ಯಪೂರ್ಣವಾದ ಸೃಜನಶೀಲ ಅಭಿವ್ಯಕ್ತಿಯಿಂದ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿ ಕೃಷಿ ಮಾಡಿದವರು. ಕಾವ್ಯ, ಕಥೆ, ಕಾದಂಬರಿ, ನಾಟಕ, ಪ್ರಬಂಧ, ಮಹಾಕಾವ್ಯ, ಆತ್ಮಕಥೆ – ಹೀಗೆ ಪ್ರತಿಯೊಂದು ಪ್ರಕಾರವು ವಾಸ್ತವತೆಗೆ ಕನ್ನಡಿ ಹಿಡಿದಂತೆ ಪ್ರಸ್ತುತ ಸಂದರ್ಭದ ಜ್ವಲಂತ ಸಮಸ್ಯೆಗಳನ್ನು ಆಳವಾಗಿಸಿಕೊಂಡು ನಿರೂಪಿತವಾಗಿದೆ. ಮಾನವನ ಮೂಲಭೂತ ಸಮಸ್ಯೆಗಳಾದ ಅನ್ನ, ಅರಿವೆ, ಆಶ್ರಯಗಳಂತೆಯೇ ಪ್ರಸ್ತುತದಲ್ಲಿ 'ಪರಿಸರ' ಅಥವಾ 'ಪ್ರಕೃತಿ'ಯೆಂಬ ಪರಿಕಲ್ಪನೆ ಕೂಡ ಬಹು ಚರ್ಚಿತ ವಿಷಯವಾಗಿದೆ. ಪರಿಸರದ ಮಹತ್ವವನ್ನು ಅರಿತ ಕವಿ ಪ್ರತಿಭೆಗಳು ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿಯೂ ಪ್ರಕೃತಿಯ ವಿವರಗಳು ಹಾಗೂ ಪರಿಸರದೊಂದಿಗಿನ ಆತ್ಮೀಯ ಸಂಬಂಧಗಳನ್ನು ಅನಾವರಣಗೊಳಿಸಿದ್ದಾರೆ. ಪ್ರಸ್ತುತ ಲೇಖನದಲ್ಲಿ ಕುವೆಂಪು ಅವರ 'ರೈಲ್ ರಸ್ತೆ' ಕವಿತೆಯನ್ನು ಕುರಿತು ಅಧ್ಯಯನ ಮಾಡಲಾಗಿದೆ. ಈ ಕವಿತೆಯನ್ನು ಪರಿಸರ ದೃಷ್ಟಿಕೋನದಿಂದ ಓದುತ್ತಾ ಹೋದರೆ ಒಳಾರ್ಥಗಳು ಓದುಗರ ಗ್ರಹಿಕೆಗೆ ಬಾರದಿರವು.*

***Keywords:*** *ಕನ್ನಡ ಸಾಹಿತ್ಯ, ಪರಿಸರ ಕಾಳಜಿ, ಕುವೆಂಪು, ರೈಲ್ ರಸ್ತೆ.*

## ಪೀಠಿಕೆ

ಪರಿಸರ ಅಥವಾ ಪ್ರಕೃತಿ ಎಂಬ ಶಬ್ದಕ್ಕೆ ಹಿಂದಿಗಿಂತಲೂ ಇಂದು ಅಂದರೆ 21ನೇ ಶತಮಾನದ ಹೊಸ್ತಿಲಲ್ಲಿ ಸಾಕಷ್ಟು ವಿಶಾಲವಾದ ಅರ್ಥಗಳಿವೆ. ಸರ್ವವ್ಯಾಪಿಯಾದ ಪರಿಸರ ಜಗತ್ತಿನ ಸೃಷ್ಟಿಗೆ ಮೂಲವಾಗಿದೆ. ಅಂದರೆ ಮಾನವ ಸಮುದಾಯದ ಸೃಷ್ಟಿಯ ಪೂರ್ವದಲ್ಲಿಯೇ ಇದು ತನ್ನ ಅಖಂಡತೆಯನ್ನು ಸ್ಥಾಪಿಸಿತ್ತು. ಹೀಗೆ ರೂಪುಗೊಂಡ ದಿನಮಾನಗಳಲ್ಲಿ ಪರಿಸರವನ್ನು ಕುರಿತ ಅರ್ಥ, ವ್ಯಾಖ್ಯಾನ, ವಿವರಣೆ, ವಿಶ್ಲೇಷಣೆ, ಚರ್ಚೆ, ಚಿಂತನ–ಮಂಥನಗಳು ಹಲವು ವಿಭಿನ್ನ ನೆಲೆಗಳಲ್ಲಿ ನಡೆಯುತ್ತಿತ್ತು. ಅಷ್ಟೇ ಅಲ್ಲದೆ ಸಾಹಿತ್ಯಕವಾಗಿಯೂ ಪರಿಸರ ಕಲಾತ್ಮಕ ರೂಪವನ್ನು ಪಡೆದುಕೊಂಡು ಅಸಂಖ್ಯಾತ ಸಾಹಿತ್ಯ ಕೃತಿಗಳ ವಿನೂತನ ಅಭಿವ್ಯಕ್ತಿಗೆ ವಸ್ತುವಾಗಿತ್ತು. ಇಂತಹ ಪರಿಸರ ಕೇವಲ ಪ್ರಾಣಿಗಳ ಮತ್ತು ಸಸ್ಯಗಳ ನಡುವಿನ ಸಂಬಂಧಗಳ ಅಧ್ಯಯನವಾಗಿರದೆ ಸಮಸ್ತ ಚೇತನಾಚೇತನ ವಸ್ತುಗಳು ಹಾಗೂ ಅವುಗಳ ಪರಿಸರದ ಅಧ್ಯಯನವೂ ಆಗಿದೆ. ಇದರಂತೆಯೇ ಮಾನವನು ಕೂಡ ಪರಿಸರದ ಅವಿಭಾಜ್ಯ ಅಂಗವಾಗಿ ಜೀವ ಪರಿಸರ ವಿಜ್ಞಾನದ ಭಾಗವಾಗಿದ್ದಾನೆ.

***Please cite this article as:*** ಸಂಗೀತ ಪಿ. (2024). ಕುವೆಂಪು ಅವರ 'ರೈಲ್ ರಸ್ತೆ' ಕವಿತೆಯಲ್ಲಿನ ಆಧುನಿಕತೆಯ ಪ್ರತಿನಿಧೀಕರಣ ಹಾಗೂ ಪರಿಣಾಮಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್*, 3(2), 95–99

ಮಾನವ ಮತ್ತು ಪರಿಸರ ಎಂಬ ಎರಡೂ ಪದಗಳು ಭಿನ್ನವಾಗಿದ್ದರೂ ವಾಸ್ತವವಾಗಿ ಇವೆರಡೂ ಒಂದಕ್ಕೊಂದು ಸಂಬಂಧವನ್ನು ಪಡೆದುಕೊಂಡಿವೆ. ಪ್ರಕೃತಿಯಲ್ಲಿ ಗೋಚರಿಸುವ ಸಮಸ್ತ ಸಂಪನ್ಮೂಲಗಳನ್ನು ಬಳಸಿಕೊಂಡು ಮಾನವ ತನ್ನ ಭವಿಷ್ಯಕ್ಕೆ ಮುಖ್ಯವೆನಿಸುವ ನವನಾಗರಿಕತೆಯನ್ನು ಕಟ್ಟಲು ಮುಂದಾದನು. ಬೌದ್ಧಿಕವಾಗಿ ಹಾಗೂ ಮಾನಸಿಕವಾಗಿ ಬುದ್ಧಿವಂತನೆಂಬ ಹಣೆಪಟ್ಟಿ ಧರಿಸಿಕೊಂಡಿರುವ ಈತ ಪರಿಸರ ವ್ಯಾಖ್ಯೆಯನ್ನು ಮಾರ್ಪಾಡು ಮಾಡುತ್ತಿರುವಂತೆ ಕಾಣುತ್ತಾನೆ. ಇಂತಹ ಸನ್ನಿವೇಶದಲ್ಲಿ ಪರಿಸರ ಕೇಂದ್ರಿತ ದೃಷ್ಟಿಕೋನ ಮಾನವರೆಲ್ಲರ ಒಟ್ಟಾರೆ ಬದುಕಿಗೆ ಅರ್ಥವನ್ನು ಕೊಡುತ್ತದೆ. ಇದರ ಮಹತ್ವವನ್ನು ಅರಿತ ಕವಿ ಪ್ರತಿಭೆಗಳು ಹತ್ತನೇ ಶತಮಾನದ ಚಂಪೂ ಸಾಹಿತ್ಯದಿಂದ ಹಿಡಿದು ಇಂದಿನ ಆಧುನಿಕ ಸಾಹಿತ್ಯದವರೆಗೂ ಪರಿಸರವನ್ನು ಭಿನ್ನ ಭಿನ್ನ ಆಯಾಮಗಳಲ್ಲಿ ಬಳಸಿದ್ದಾರೆ. ಸಾಹಿತ್ಯದ ಪ್ರಮುಖ ಪ್ರಕಾರಗಳಾದ ಚಂಪೂ, ವಚನ, ತ್ರಿಪದಿ, ರಗಳೆ, ಷಟ್ಪದಿ, ಸಾಂಗತ್ಯ ಇಂತಹ ರಚನೆಗಳಲ್ಲಿ ಪ್ರಕೃತಿಯ ವಿವರಗಳು ದಟ್ಟವಾಗಿ ಕಾಣಸಿಗುತ್ತವೆ. ಪರಿಸರದೊಂದಿಗಿನ ಆತ್ಮೀಯ ಸಂಬಂಧಗಳು ಅನಾವರಣಗೊಂಡಿರುವುದು ಪ್ರಕಟಗೊಳ್ಳುತ್ತದೆ. ಆದರೆ ಮಾನವನ ಹಂತಹಂತದ ಬೆಳವಣಿಗೆಯಿಂದ ಪರಿಸರದ ಏಕಾಂತಕ್ಕೆ ಧಕ್ಕೆ ಉಂಟಾಗಿ ಕ್ರಮೇಣ ನಿಧಾನಗತಿಯಲ್ಲಿ ಪಲ್ಲಟಗೊಳ್ಳಲು ಆರಂಭಿಸಿತು. ಯಾವುದೇ ಪ್ರದೇಶದಲ್ಲಿನ ಭೌಗೋಳಿಕ ಪರಿಸರ ಮತ್ತು ಅಲ್ಲಿ ಜೀವಿಸುವ ಜೀವಿಗಳ ಸಂಬಂಧಗಳು ಪರಸ್ಪರ ಹೋರಾಟ ಹೊಂದಾಣಿಕೆಗಳ ಆಧಾರದಲ್ಲಿ ನಡೆಯುತ್ತಿರುತ್ತದೆ. ಎಷ್ಟೋ ಸಾವಿರ ವರ್ಷಗಳಿಂದ ಈ ಬಗೆಯ ನಿಸರ್ಗ ಧರ್ಮದಲ್ಲಿಯೇ ಮುಂದುವರಿದ ವ್ಯವಸ್ಥೆ ಇಂದು ಸಂಪೂರ್ಣವಾಗಿ ಬದಲಾಗಿದೆ.

ಆದಿ ಮಾನವರು ಪ್ರಕೃತಿಯ ಮಡಿಲಲ್ಲಿಯೇ ಹುಟ್ಟಿ ಬೆಳೆದು ಅದರ ನಿಕಟ ಸಹವಾಸದಲ್ಲಿಯೇ ಜೀವಿಸುತ್ತಿದ್ದರು ಎಂಬುದು ಪರಿಸರ ಚಿಂತಕ ಹೆನ್ರಿ ಡೇವಿಡ್ ಥೋರೋನ ಅಭಿಮತ. ಅಂತೆಯೇ ಮಾನವ ಪರಿಪೂರ್ಣನೆನಿಸಿಕೊಳ್ಳಬೇಕಾದರೆ ಅಥವಾ ಪೂರ್ಣತ್ವದೆಡೆಗೆ ಚಲಿಸಬೇಕಾದರೆ ಎಂದೆಂದಿಗೂ ಪರಿಸರದೊಂದಿಗೆ ಸ್ನೇಹಭಾವನೆಯನ್ನು ಉಳಿಸಿಕೊಂಡಿರಬೇಕು. ಪ್ರಕೃತಿ ಮತ್ತು ಮನುಷ್ಯ ಒಂದೇ ಎಂಬ ಸಮತಾಭಾವವನ್ನು ಬೆಳೆಸಿಕೊಳ್ಳಬೇಕೇ ಹೊರತು ಅಹಂಕಾರವನ್ನಲ್ಲ. ಇಂತಹ ವಾಸ್ತವ ಸತ್ಯ ತಿಳಿದಿದ್ದರೂ 'ಇರುವುದೊಂದೇ ಭೂಮಿ' ಆದರೂ ಮಾನವ ನಿರಂತರವಾಗಿ ಅಭಿವೃದ್ಧಿ ಚಟುವಟಿಕೆಗಳಲ್ಲಿ ಮಗ್ನನಾಗಿದ್ದಾನೆ.

ಕೈಗಾರಿಕೀಕರಣ, ನಗರೀಕರಣ, ಪ್ರಗತಿ ಪ್ರಕ್ರಿಯೆಗಳು, ವಿಜ್ಞಾನ ಹಾಗೂ ತಂತ್ರಜ್ಞಾನದ ಅಪರಿಮಿತ ಬೆಳವಣಿಗೆ, ಯುದ್ಧ, ಹಿಂಸೆ, ಕ್ರೌರ್ಯ, ಭಯೋತ್ಪಾದನೆ, ಉಗ್ರಗಾಮಿ ಚಟುವಟಿಕೆಗಳು, ಆಧುನಿಕ ಕೃಷಿ ಪದ್ಧತಿಗಳು, ಬೃಹತ್ ಅಣೆಕಟ್ಟುಗಳ ನಿರ್ಮಾಣ, ವಾಣಿಜ್ಯ ಬೆಳೆಗಳ ಬಗೆಗಿನ ಒಲವು ಇಂತಹ ಅಸಂಖ್ಯಾತ ಕಾರ್ಯಗಳು ನಿಜಕ್ಕೂ ಗಾಬರಿ ಹುಟ್ಟಿಸುತ್ತವೆ. ಇವು ಇಪ್ಪತ್ತೊಂದನೇ ಶತಮಾನದ ಪರಿಸರ ಪರಿಕಲ್ಪನೆಗೆ ಆತಂಕವನ್ನು ತಂದೊಡ್ಡುತ್ತವೆ. ಈ ಬಗೆಯ ಅಭಿವೃದ್ಧಿ ಪಥದ ಕುಸರಿ ಕೆಲಸಗಳಿಗೆ ಮುಂದಾಗಿರುವ ಮನುಷ್ಯ ತನ್ನ ಜೀವನದ ಕರಾಳತೆಯನ್ನು ತಾನೇ ವೀಕ್ಷಿಸುತ್ತಾನೆ ಎನ್ನುವುದರಲ್ಲಿ ಯಾವ ಅನುಮಾನವೂ ಇಲ್ಲ. ಪರಿಸರದ ಮೇಲಿನ ಹಲವು ರೀತಿಯ ದಬ್ಬಾಳಿಕೆಗಳು ಮಾನವನ ಮರಣ ಶಾಸನಗಳನ್ನು ಈಗಾಗಲೇ ಸಿದ್ಧಪಡಿಸಿವೆ. ಜಾಗತೀಕರಣದ ನೀತಿ ನಿಯಮಗಳಿಂದ ಆಧುನಿಕ ಮಾನವ ಅತಿಭೋಗದ ದುರಾಸೆಯ ರೋಗಕ್ಕೆ ಬಲಿಯಾಗಿ ಎಲ್ಲವೂ ನನಗೆ ಎಂಬ ಪದಾರ್ಥ ವ್ಯಾಮೋಹ ಧೋರಣೆಗೆ ಒಳಗಾಗುತ್ತಿದ್ದಾನೆ. ಇದು ಈ ಕಾಲಮಾನದ ದುರಂತವೇ ಹೌದು. ಅಸಂಖ್ಯಾತ ವರ್ಷಗಳಿಂದ ಪ್ರಕೃತಿಯಲ್ಲಿನ ನೈಸರ್ಗಿಕ ಸಂಪನ್ಮೂಲಗಳು ಸಮಾನವಾಗಿ ಹಂಚಿಕೆಯಾಗುತ್ತಿದ್ದಾಗ ಪರಿಸರದ ಬಗೆಗಿನ

ಬಿಕ್ಕಟ್ಟುಗಳ ಚಿಂತೆ ಯಾರಿಗೂ ಅಷ್ಟಾಗಿ ಇರಲಿಲ್ಲ. ಆದರೆ ಇಂದು ಇದು ತದ್ವಿರುದ್ಧವಾಗಿದೆ.

ಪರಿಸರವನ್ನು ಸಂರಕ್ಷಣೆ ಮಾಡುವಲ್ಲಿ ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳು ಎಚ್ಚೆತ್ತುಕೊಂಡು ಕ್ರಮವಹಿಸಿದಂತೆ ನಮ್ಮ ರಾಷ್ಟ್ರ ಯಾವುದೇ ಪೂರ್ವನಿಯೋಜಿತ ಯೋಜನೆಗಳನ್ನು ಹಾಕಿಕೊಂಡಿರಲಿಲ್ಲ. ಹಾಗಾಗಿಯೇ ಭಾರತದಲ್ಲಿ 1960ರ ತರುವಾಯವೇ ಪರಿಸರ ಪರವಾದ ಕಾಳಜಿಗಳು ಕಂಡುಬಂದವು. ಅಲ್ಲಿಯವರೆಗೂ ಯಥೋಚಿತವಾಗಿ ಪರಿಸರದ ಪ್ರಶ್ನೆಗಳು ಪ್ರಶ್ನೆಗಳಾಗಿಯೇ ಉಳಿದಿದ್ದವು. ಇಷ್ಟಾದರೂ ಮಾನವ ಯಶಸ್ಸನ್ನು ಸಾಧಿಸುವ ಧಾವಂತದಲ್ಲಿದ್ದಾಗ ಪರಿಸರ ಮತ್ತಷ್ಟು ದ್ವಂದ್ವ ನಿಲುವನ್ನು ಪಡೆಯಿತು. ಪ್ರಕೃತಿಯಲ್ಲಿನ ಸಂಪನ್ಮೂಲಗಳ ಹೇರಳ ಬಳಕೆಯಿಂದ ಮನುಕುಲ ಸಮೃದ್ಧವಾಗುವುದರೆಡೆಗೆ ಚಲಿಸಿತೇ ಹೊರತು ಅದರ ಬದಲಾಗಿ ಸಮಗ್ರ ಸೃಷ್ಟಿಯನ್ನು ಕಾಪಾಡಿಕೊಂಡು ಬರುವ ಯಾವ ತರಹದ ಸದುದ್ದೇಶವು ಮಾನವನಿಗಿರಲಿಲ್ಲ. ಇಲ್ಲಿಂದ ಎಲ್ಲರೂ ಪ್ರಗತಿಯ ಮಂತ್ರವನ್ನು ಜಪಿಸಲು ಪ್ರಾರಂಭಿಸಿದರು. ಅಷ್ಟೇ ವೇಗವಾಗಿ ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳ ನಡುವೆ ಪೈಪೋಟಿ ನಡೆಸಿ ತಮ್ಮ ಆರ್ಥಿಕಾಭಿವೃದ್ಧಿಯನ್ನು ಹಿಮ್ಮಡಿಗೊಳಿಸಿಕೊಳ್ಳುವ ಪ್ರಯತ್ನದಲ್ಲಿ ವೃಥಾ ಕಾಲಹರಣ ಮಾಡಿದರು.

ಆಧುನಿಕತೆಯತ್ತಲೇ ಹೊರಳಿರುವ ಮಾನವ ತನ್ನ ಮುಂದಿನ ಭವಿಷ್ಯದ ದಿನಗಳನ್ನು ಹಾಗೂ ಅದರ ಮಾರಕ ಪರಿಣಾಮವನ್ನು ಒಮ್ಮೆಯಾದರೂ ಅವಗಾಹನೆಗೆ ತಂದುಕೊಳ್ಳದೆ ಕಾಲನೂಕಿದ್ದು ಮಾತ್ರ ದುರಂತದ ಸಂಗತಿಯೆನಿಸುತ್ತದೆ. ಇಂತಹ ಎಲ್ಲ ಪ್ರಯತ್ನಗಳ ಫಲವಾಗಿ ಹೊಸ ಕಾಲದ ಹೊಸ ವಿನ್ಯಾಸದ ಸಂಶೋಧನೆ ಹಲವು ಬಗೆಯ ಆವಿಷ್ಕಾರಗಳಿಗೆ ಅನುವು ಮಾಡಿಕೊಟ್ಟಿತು. ಅದರ ಕೊಡುಗೆಯಾಗಿ ಬಂದದ್ದೇ ರೈಲು ಹಾಗೂ ಅದರ ಚಲನೆಗೆಂದು ಆಧುನಿಕತೆಯ ಸ್ಪರ್ಶದೊಂದಿಗೆ ಮೂಡಿದ ರಸ್ತೆ. ಹೀಗೆ ಕಾಲ ಉರುಳಿದಂತೆ ಮಾನವನ ಅತಿಯಾಸೆಯ ವೃಕ್ಷ ತನ್ನ ರೆಂಬೆಕೊಂಬೆಗಳನ್ನು ನಿಲುಗಡೆಯಿಲ್ಲದೆ ಬೆಳೆಸಿಕೊಳ್ಳಲು ಪ್ರಾರಂಭಿಸಿತು.

ಜಾಗತಿಕ ಮಟ್ಟದ ಬಹು ಚರ್ಚಿತ ಹಾಗೂ ಚಿಂತಿತ ವಿಷಯವಾಗಿ ರೂಪುಗೊಂಡ ಆಧುನಿಕತೆ ತನ್ನ ಬಲಾಢ್ಯ ಬಾಹುಗಳನ್ನು ಎಲ್ಲೆಡೆಗಳಲ್ಲಿ ಚಾಚಿ ವಿಸ್ತರಿಸಲು ಮೊದಲು ಮಾಡಿತು. ಇದರ ಪ್ರತಿರೂಪವಾಗಿ ಎಲ್ಲರ ಆಕರ್ಷಣೆಯ ಕೇಂದ್ರ ಬಿಂದುವಾಗಿ ಬಂದದ್ದೇ ರೈಲ್ ರಸ್ತೆ. ಕುವೆಂಪು ಅವರ 'ರೈಲ್ ರಸ್ತೆ' ಕವಿತೆ ಮಾರ್ಚ್ 16, 1934ರಂದು ಅಕ್ಷರ ರೂಪವನ್ನು ಕಂಡಿತು. ಇದು 1944ರಲ್ಲಿ ಪ್ರಕಟವಾದ 'ಕೋಗಿಲೆ ಮತ್ತು ಸೋವಿಯತ್ ರಷ್ಯಾ' ಕವನ ಸಂಕಲನದ ಒಂದು ಗರಿಯೂ ಹೌದು. ಮೇಲ್ನೋಟಕ್ಕೆ ಸರಳವಾದ ಕವಿತೆಯಾಗಿ ಕಂಡರೂ ಹಲವು ರೀತಿಯ ಅರ್ಥ ಪರಂಪರೆಗಳನ್ನು ತನ್ನಲ್ಲಿ ಗರ್ಭೀಕರಿಸಿಕೊಂಡಿದೆ. ಈ ಕವಿತೆಗೂ ಆಧುನಿಕ ಮಾನವನ ನಿತ್ಯ ನಿರಂತರ ಬೆಳವಣಿಗೆಗೂ ತೀರಾ ಹತ್ತಿರದ ಸಂಬಂಧವಿದೆ. ಪರಿಸರ ದೃಷ್ಟಿಕೋನದಿಂದ ಕವಿತೆಯನ್ನು ಓದುತ್ತಾ ಹೋದರೆ ಒಳಾರ್ಥಗಳು ಓದುಗರ ಗ್ರಹಿಕೆಗೆ ಬಾರದಿರವು. ಆದ್ದರಿಂದಲೇ ಇಂಥ ಕವಿತೆಯ ಮರು ಓದಿಗೆ ಮೊದಲ ಆದ್ಯತೆ ನೀಡಲಾಗಿದೆ.

ಭೂದೇವಿ ಇಡೀ ಮನುಕುಲದ ಎಲ್ಲಾ ರೀತಿಯ ಕ್ರೌರ್ಯ ಅಟ್ಟಹಾಸವನ್ನು ತಾಳುವ ಸಹನಾ ಮೂರ್ತಿ. ಇದನ್ನೇ ಮೂಲಬಂಡವಾಳವನ್ನಾಗಿಸಿ ಕೊಂಡ ಸಾಮಾಜಿಕ ವ್ಯವಸ್ಥೆ ತನ್ನ ಅಧಿಕಾರದ ಮುದ್ರೆಯನ್ನೊತ್ತಿತು. ಇಂತಹ ಇಬ್ಬಂದಿ ಸ್ಥಿತಿಯಲ್ಲಿ ಭೂಮಾತೆ ಅಂಗವೈಕಲ್ಯಕ್ಕೆ ತುತ್ತಾಗಿ ಕಂಪನಕ್ಕೊಳಪಟ್ಟಿದ್ದಾಳೆ. ಸದಾ ಸುಡುವ ಬಿಸಿಲಿನ ಬೇಗೆಗೆ ಮೂರ್ಛೆಗೊಂಡಿದ್ದಾಳೆ. ಇಂತಹ ಸ್ಥಿತಿಯಲ್ಲಿಯೂ ರೈಲು ಹರಿಯುವ ಕಂಬಿ ದಾರಿ ಬಿಟ್ಟೂ ಬಿಡದೆ ತನ್ನ ನಿರಂತರತೆಯನ್ನು ಸ್ಥಾಪಿಸಿಕೊಂಡಿದೆ. ಕರ್ಣಕಠೋರವಾದ ಕರ್ಕಶ ಶಬ್ದವನ್ನು ಪಸರಿಸುತ್ತಾ ಒಂದು ಎಲ್ಲೆಯಿಂದ

ಮತ್ತೊಂದು ಎಲ್ಲೆಗೆ ತನ್ನ ಪಯಣವನ್ನು ಬೆಳೆಸಿದೆ. ನಿತ್ಯನೂತನ ನಾಗರೀಕತೆಯ ಕೊಡುಗೆಯೆಂಬಂತೆ ದಿಕ್ಕುದಿಕ್ಕುಗಳಿಗೆ ಹರಿಯುತ್ತಿದೆ. ಮಾನವನ ಬೌದ್ಧಿಕತೆಯ ಸಂಕೇತವಾಗಿರುವ ರೈಲ್ ರಸ್ತೆಯ ಆಗಮನವೆಷ್ಟು ಆಕರ್ಷಕವಾಗಿದೆಯೋ ಅದರ ಮುಂದುವರಿಕೆಯೂ ಕೂಡ ಅನೂಹ್ಯವಾಗಿದೆ. ಈ ಪ್ರಕ್ರಿಯೆಯಿಂದ ಎದುರಾಗುವ ಸಮಸ್ಯೆಗಳ ಸರಮಾಲೆಯಂತೂ ಊಹಾತೀತ.

ಬೇಂದ್ರೆಯವರ 'ಅನ್ನಯಜ್ಞ' ಕವಿತೆಯ 'ಕೂಸುಗಳಿಗೆ ಹಾಲಿಲ್ಲ, ಪಶುಬಲಿಯೇ ನಡೆದಿದೆ' ಎಂಬ ಮಾತಿನಂತೆ ಬಡಪಶುಗಳು ಹಸಿವಿನಿಂದ ಕಂಗಾಲಾಗುತ್ತಿವೆ. ಎಲ್ಲೂ ನೆರಳಿಲ್ಲದೆ ಕನಿಷ್ಠ ತನ್ನ ನೆರಳನ್ನು ಕೂಡ ಹಿಂಬಾಲಿಸಲು ತ್ರಾಣವಿಲ್ಲದೆ ನಿತ್ರಾಣಗೊಂಡು ಪ್ರಾಣಿಗಳು ಮೂಕ ವೇದನೆಯನ್ನನುಭವಿಸುತ್ತಿವೆ. ಮರಗಿಡಗಳು ಮಳೆಯನ್ನು ನಿರೀಕ್ಷಿಸುತ್ತಾ ಸೊರಗಿ ಹೋಗಿವೆ. ಪ್ರಳಯಕಾಲದ ಶೂನ್ಯದಂತೆ ಎಲ್ಲೆಲ್ಲೂ ಮೌನವೇ ಮಹತ್ತಾಗಿದೆ. ಈ ಬಗೆಯ ಯಾವ ಆಗುಹೋಗುಗಳನ್ನು ಲೆಕ್ಕಿಸದೆ ಕಂಬಿದಾರಿ ನಿರಾತಂಕವಾಗಿ ಮುನ್ನುಗ್ಗುತ್ತಿದೆ.

ಮಾನವನು ನಿರಂತರವಾಗಿ ನಡೆಸುತ್ತಿರುವ ಅಭಿವೃದ್ಧಿ ಚಟುವಟಿಕೆಗಳಿಂದ ಭಯಭೀತಗೊಂಡ ಜೀವ ಜಂತುಗಳು ಹಾದಿಕಾಣದೆ ಸ್ತಬ್ದಗೊಂಡಿವೆ. 'ರೈಲು ಬಂದಿತು ರೈಲು' ಎಂದು ಭೂಮಿಯೇ ಸ್ವತಃ ನಡುಗಿ ಪ್ರಜ್ಞಾಹೀನಳಾಗಿದ್ದಾಳೆ. ಈ ಮಧ್ಯೆ ರೈಲಿನ ರೂಪ ಆಕಾರಗಳನ್ನು ಕವಿ ಮನಮುಟ್ಟುವ ಹಾಗೆ ಚಿತ್ರಿಸಿದ್ದಾರೆ.

***ಕರಿಯ ತಲೆ, ಗಾಜುಗಣ್ಣು;***
***ಬಾಯಲ್ಲಿ ಹೊಗೆ, ಮೂಗಿನಲ್ಲಿ ಕಿಡಿ, 'ರೈಲಿನೆಂಜಿಣ್ಣು'!***
***ಹರಿಯುತಿದೆ ಗಡಗಡನೆ ಸದ್ದುಮಾಡಿ***
***ದೊಡ್ಡದೊಂದೊನಕೆ ಹುಳು! ಹೊಟ್ಟೆಯಲ್ಲಾ ಗಾಡಿ!***
***ಸಿಳ್ಳು ಹಾಕುತಿದೆ; ಕಿಡಿಯ ಸೂಸುತಿದೆ***
***ಹೊಗೆಯನೂದುತಿದೆ; ನುಗ್ಗಿಯೋಡುತಿದೆ!*** [1]

ಎಂಬ ಕವನದ ಸಾಲುಗಳು ಕುತೂಹಲಕಾರಿಯಾಗಿ ರೈಲು ಕ್ರಮಿಸುವ ರೀತಿಯನ್ನು ಕಟ್ಟಿಕೊಟ್ಟಿವೆ. ರೈಲು ಜನರ ಪರಿವೆಯೇ ಇಲ್ಲದೆ ಭಾವಶೂನ್ಯವಾಗಿ ಯಂತ್ರರೂಪಿಯಾಗಿ ತನ್ನ ಸೇವೆಯನ್ನು ಸಲ್ಲಿಸುತ್ತಿದೆ. ಈ ನಡೆ ಹೀಗೇ ಮುಂದುವರಿದಿದ್ದೇ ಆದರೆ ಭೂಮಿ ಕ್ರಮೇಣ ನಿಧಾನಗತಿಯಲ್ಲಿ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳಲಿದೆ. ಅಷ್ಟೇ ಅಲ್ಲದೆ ಇದು ಮುಂದಿನ ಭವಿಷ್ಯದ ಕರಾಳತೆಯನ್ನು ಸೂಚಿಸುವ ಅಂಶವೂ ಆಗಿದೆ.

ಆದ್ದರಿಂದ ಕಡ್ಡಾಯವಾಗಿ ಮಾನವ ಮತ್ತು ಪರಿಸರ ಸಂಬಂಧಗಳ ಬೆಸುಗೆಯಾಗಬೇಕು. ಆರೋಗ್ಯಕರವಾದ ಸಮಾಜವನ್ನು ಕಟ್ಟಲು ಇಂಥ ಅನ್ಯೋನ್ಯತೆ ಸಹಕಾರಿ. ಉತ್ತಮ ಸಮಾಜ ಎಂದಿಗೂ ಮಾದರಿ ಸಮಾಜವಾಗಿ ಬದಲಾಗುತ್ತದೆ. ಆದರೆ ಇಂದಿನ ಅಭಿವೃದ್ಧಿ ಪ್ರಕ್ರಿಯೆಗಳು ಪರಿಸರದ ಸ್ಥಿತಿಗತಿಗಳನ್ನು ಸರಿಪಡಿಸಲಾಗದ ಮಟ್ಟವನ್ನು ತಲುಪಿವೆ. ಇದಕ್ಕೆ ಬಹು ಪ್ರಮುಖವಾಗಿ ಜನರೂ ಹಾಗೂ ಅವರ ಜೀವನ ಶೈಲಿಗಳಲ್ಲಿನ ಬದಲಾವಣೆಗಳೇ ಕಾರಣವಾಗಿವೆ. ಮಾನವ ತನ್ನ ಸುತ್ತಣ ಪರಿಸರ ವ್ಯವಸ್ಥೆಗಳನ್ನು ಹಾಳುಗೆಡವುತ್ತಾ ಕೋಟ್ಯಂತರ ಟನ್ನುಗಳಷ್ಟು ವಿಷಯುಕ್ತ ವಸ್ತುಗಳನ್ನು ಪ್ರಕೃತಿಯ ಗರ್ಭದ ಆಳಕ್ಕೆ ನೂಕುತ್ತಿದ್ದಾನೆ. ಕೈಗಾರಿಕೆಗಳಿಂದ, ಕಾರ್ಖಾನೆಗಳಿಂದ, ಬೃಹತ್ ವಾಣಿಜ್ಯ ಸಂಕೀರ್ಣಗಳಿಂದ,ಅಪಾರ್ಟ್‌ಮೆಂಟ್‌ಗಳಿಂದ, ನಗರ ಪ್ರದೇಶಗಳಿಂದ ಪ್ರತಿನಿತ್ಯವೂ ಉತ್ಪಾದನೆಯಾಗುವ ಮಾಲಿನ್ಯಯುಕ್ತ ವಸ್ತುಗಳು ನಾವು ಉಸಿರಾಡುವ ಗಾಳಿ, ಸೇವಿಸುವ ಆಹಾರ, ವಾಸಿಸುವ ಜಾಗಗಳನ್ನು ಸಮಗ್ರವಾಗಿ ನಾಶಮಾಡುತ್ತಿವೆ. ಪರಿಸರದಿಂದ ಮಾನವ ತನ್ನ ಅವಶ್ಯಕತೆಗಳನ್ನು ಪೂರೈಸಿಕೊಳ್ಳುತ್ತಲೇ ಪರಿಸರದ ಗುಣಮಟ್ಟ ಮತ್ತು ಜೀವ ಪ್ರಭೇದಗಳ ಬದುಕಿನ ಗುಣಮಟ್ಟವನ್ನು ನಾಶಪಡಿಸುತ್ತಾ ಅಸಂಖ್ಯಾತ ಜೀವಿಗಳನ್ನು ವಿನಾಶದ ಅಂಚಿಗೆ ತಳ್ಳುತ್ತಿದ್ದಾನೆ. ಇದಕ್ಕೆ ಉತ್ತರವೋ ಎಂಬಂತೆ 21ನೇ ಶತಮಾನದ ಪರಿಸರ

ಬಿಕ್ಕಟ್ಟುಗಳು ಬಹು ಸಂಕೀರ್ಣ ಸಮಸ್ಯೆಗಳಾಗಿ ಬದಲಾವಣೆಗೊಂಡಿವೆ. ಸರಿಸುಮಾರಾಗಿ ಅರ್ಧದಷ್ಟು ಪರಿಸರ ನಾಶವಾಗುತ್ತಿದೆ. ಈ ಸಮಸ್ಯೆ ವಿಶ್ವದ ಎಲ್ಲಾ ರಾಷ್ಟ್ರಗಳ ಮೇಲೂ ಪರಿಣಾಮ ಬೀರುತ್ತಿದೆ. ಇಂತಹ ಮಾರಕವಾದ ಚಟುವಟಿಕೆಗಳಿಂದ ಹೊರಬರಬೇಕಾದರೆ ಮನುಷ್ಯ ಮತ್ತು ಪರಿಸರದ ಸಂಬಂಧಗಳು ಉತ್ತಮಗೊಳ್ಳಬೇಕಾಗಿದೆ.

ಪರಿಸರದೊಂದಿಗಿನ ಮನುಷ್ಯನ ಸಂಬಂಧ ಅನಾದಿಕಾಲದಿಂದಲೂ ಆತ್ಮೀಯತೆಯಿಂದ ಕೂಡಿದ್ದು, ತಾನು ಬದುಕುಳಿಯಲು ಮೂಲವಾಗಿರುವ ಉಸಿರಾಡುವ ಗಾಳಿ, ಪ್ರಾಣ ಪೋಷಣೆಗೆ ಅವಶ್ಯವಾಗಿರುವ ನೀರು, ಆಹಾರ ಎಲ್ಲವೂ ಪರಿಸರ ಮೂಲದ್ದೇ ಆಗಿದೆ. ಇಂತಹ ಅಖಂಡತೆಗೆ ಭಂಗ ಬಂದರೆ ನಾವು ಯಾರೂ ಊಹಿಸಲಾರದಂತಹ ಬಿಕ್ಕಟ್ಟುಗಳನ್ನು ಎದುರಿಸಬೇಕಾಗುತ್ತದೆ. ಪ್ರಕೃತಿಯಿಲ್ಲದೆ ಮನುಷ್ಯರು ಬದುಕಲು ಸಾಧ್ಯವಿಲ್ಲ. ಆದರೆ ಮನುಷ್ಯನಿಲ್ಲದೆ ಪರಿಸರ ಸಮೃದ್ಧವಾಗಿ ಉಳಿಯಬಲ್ಲದು. ಪರಿಸರದ ಮೌಲ್ಯಗಳನ್ನು ಅರಿಯದ ಮಾನವ ಮರಗಳನ್ನು ಕಡಿಯುತ್ತಿದ್ದಾನೆ. ನದಿ ಹಾಗೂ ಜಲಮೂಲಗಳನ್ನು ಕಲುಷಿತಗೊಳಿಸುತ್ತಿದ್ದಾನೆ. ಮಾಲಿನ್ಯದ ಪ್ರಮಾಣವನ್ನು ವಿಸ್ತರಿಸುತ್ತಿದ್ದಾನೆ. ತದೇಕಚಿತ್ತವಾಗಿ ಅಭಿವೃದ್ಧಿಯೆಡೆಗೆ ತನ್ನ ಪಯಣವನ್ನು ಬೆಳೆಸಿ ಮೈಮರೆತಿದ್ದಾನೆ.

21ನೇ ಶತಮಾನದಲ್ಲಿ ಕೇವಲ 24ನೆ ವರ್ಷದ ಸಂಭ್ರಮಾಚರಣೆಯಲ್ಲಿ ಮೆರೆಯುತ್ತಿರುವ ನಮಗೆ ಇಂದು ಇಡೀ ಜಗತ್ತು ಎದುರಿಸುತ್ತಿರುವ ಸಂಕಟದ ಸ್ಥಿತಿಯ ದರ್ಶನ ಒಮ್ಮೆಯಾದರೂ ನಿಜಕ್ಕೂ ಗಾಬರಿಯೆನಿಸುತ್ತದೆ. ಕಳೆದ ನೂರು ದಶಕಗಳಲ್ಲಿ ನಿಧಾನಗತಿಯಲ್ಲಿ ಉಂಟಾಗಿರುವ ಹೇರಳ ಪ್ರಮಾಣದ ಪರಿಸರ ವಿರೋಧಿ ಚಟುವಟಿಕೆಗಳು ಮುಂದಿನ ಯುವ ಜನಾಂಗಕ್ಕೆ ಮಾರಕವಾಗಿ ಪರಿಣಮಿಸಿವೆ. ತಂತ್ರಜ್ಞಾನದಲ್ಲಿ ಎಷ್ಟೇ ಮುಂದುವರೆದ ಮನುಷ್ಯನಾದರೂ ಸಹ ಇಂತಹ ಅವ್ಯವಸ್ಥೆಯನ್ನು ಸರಿಪಡಿಸಲು ಹಾಗೂ ಅಲ್ಲಿನ ನ್ಯೂನ್ಯತೆಗಳನ್ನು ತಿದ್ದಲು ಸಾಧ್ಯವಾಗುತ್ತಿಲ್ಲ. ಏಕೆಂದರೆ ಆ ಪ್ರಮಾಣದಲ್ಲಿ ಪರಿಸರ ಘಾಸಿಗೊಂಡಿದೆ. ಇಡೀ ಭೂಖಂಡ ವಿಷದ ವರ್ತುಲವನ್ನು ನಿರ್ಮಿಸಿಕೊಂಡಿದೆ. ಇಂತಹ ಪ್ರಕ್ರಿಯೆಗಳಿಂದ ಹೊರಬರಬೇಕಾದರೆ ಪರಿಸರ ಸ್ನೇಹಿ ಸಂಬಂಧಗಳನ್ನು ಬೆಳೆಸಿಕೊಳ್ಳುವ ನಿಟ್ಟಿನಲ್ಲಿ ಪ್ರತಿಯೋರ್ವ ಪ್ರಜೆಯೂ ಕಾರ್ಯ ಪ್ರವೃತ್ತನಾಗಬೇಕು.

**ಕೊನೆಟಿಪ್ಪಣಿ**

1. *ಕುವೆಂಪು ಸಮಗ್ರ ಕಾವ್ಯ ಸಂಪುಟ–1,* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಪು.398

**ಪರಾಮರ್ಶನ ಗ್ರಂಥಗಳು**


- ಚಂದ್ರ ಪೂಜಾರಿ, ಎಂ. (1988). *ಪರಿಸರ ಮತ್ತು ಅಭಿವೃದ್ಧಿ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- *ಕುವೆಂಪು ಸಮಗ್ರ ಕಾವ್ಯ ಸಂಪುಟ–01,* (2000). ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಮೋಹನಕೃಷ್ಣ ರೈ, ಕೆ. (1997). *ನಗರೀಕರಣ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಪುಟ್ಟಯ್ಯ ಈ.ಟಿ. (1988). *ಪರಿಸರ ಮತ್ತು ಮಾನವ.* ಸಂಕಲನ.
- ಸಂಗೀತ, ಪಿ. (2021). *ಇಳೆಯೆಂದರೆ ಬರಿ ಮಣ್ಣಲ್ಲ.* ವಿಹಾಪುಸ್ತಕ.